ಅ) ಮಸ್ಕಿ ನಾಲಾ ಯೋಜನೆ ಯಾವ ಹಂತದಲ್ಲಿದೆ.
ಆ) ಈ ಯೋಜನೆಗೆ ಮಂಜೂರಾದ ಹಣವೆಷ್ಟು ;
ಇ) ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿದೆ
ಈ) ಎಷ್ಟು ಎಕರೆ ಪ್ರದೇಶ ಇಲ್ಲಿಯವರೆಗೆ ನೀರಾವರಿಯಾಗಿದೆ;

ಶ್ರೀ ಓಂ ಪ್ರಕಾಶ್ ಕಣಗಲಿ (ಬೃಹತ್ ನೀರಾವರಿ ರಾಜ್ಯ ಸಚಿವರು) :

ಅ) ಎಡದಂಡೆ ಮಣ್ಣಿನ ವಡ್ಡಿನ ಕೆಲಸ ಹಾಗೂ ಮುಖ್ಯ ತೂಬಿನ ಕೆಲಸ ಮುಗಿದಿದೆ. ಬಲದಂಡೆ ಮಣ್ಣಿನ ವಡ್ಡಿನ ಕೆಲಸ ಹಾಗೂ ಮುಖ್ಯ ತೂಬಿನ ಕೆಲಸ ಪ್ರಗತಿಯಲ್ಲಿದೆ.
ಆ) ಈ ಯೋಜನೆಯ ಮೂಲ ಅಂದಾಜು ಮೊತ್ತ ರೂ.311.00 ಲಕ್ಷಗಳಾಗಿರುತ್ತದೆ. ಪರಿಷ್ಕೃತ ಅಂದಾಜು ಮೊತ್ತ ರೂ. 1429.80 ಲಕ್ಷಗಳಾಗಿರುತ್ತದೆ. (ಇದು 84-85ರ ದರಪಟ್ಟಿಯ ಆಧಾರದ ಮೇಲೆ)
ಇ) ಜನವರಿ 1993ರ ವರೆಗೆ ಈ ಯೋಜನೆಗೆ ರೂ.384.00 ಲಕ್ಷಗಳು ವೆಚ್ಚವಾಗಿರುತ್ತದೆ.
ಈ) ಇನ್ನೂ ನೀರಾವರಿ ಮಾಡಬೇಕಾಗಿದೆ.

ವಿಷಯ : 1992-93ನೇ ಸಾಲಿನಲ್ಲಿ ಬೃಹತ್ ನೀರಾವರಿ ಇಲಾಖೆಗೆ ನಿಗದಿಪಡಿಸಿದ ಹಣ.

Q : 371

ಶ್ರೀ ಬಿ. ಹಂಪನ ಗೌಡ (ಸಿಂಧನೂರು) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) 1992-93ನೇ ಸಾಲಿನಲ್ಲಿ ಬೃಹತ್ ನೀರಾವರಿ ಇಲಾಖೆಗೆ ನಿಗದಿಪಡಿಸಿದ ಹಣವೆಷ್ಟು?
ಆ) ರಾಜ್ಯದಲ್ಲಿರುವ ಬೃಹತ್ ನೀರಾವರಿ ಯೋಜನೆಗಳೆಷ್ಟು ಹಾಗೂ ಯಾವ ವರ್ಷದಲ್ಲಿ ಈ ಯೋಜನೆಗಳಿಗೆ ಶಂಕುಸ್ಥಾಪನೆ ಮಾಡಲಾಗಿದೆ.
ಇ) ಈ ಯೋಜನೆಗಳು ಪೂರ್ಣಗೊಳ್ಳಲು ಮಂಜೂರಾದ ಹಣವೆಷ್ಟು ; ಮತ್ತು ಇಲ್ಲಿಯವರೆಗೆ ಯೋಜನೆಗಳಿಗೆ ಖರ್ಚಾದ ಹಣವೆಷ್ಟು ?

ಶ್ರೀ ಎಸ್. ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) 1992-93ನೇ ಸಾಲಿನಲ್ಲಿ ನೀರಾವರಿ ಯೋಜನೆಗಳಿಗೆ ನಿಗದಿಪಡಿಸಿದ ಹಣ 405.40 ಕೋಟಿ ರೂ.ಗಳು.
ಆ) ಮತ್ತು ಇ)
ವಿವರಗಳನ್ನು ಲಗತ್ತಿಸಲಾಗಿರುವ ಪಟ್ಟಿಯಲ್ಲಿ ಕೊಡಲಾಗಿದೆ.

ವಿಷಯ : 1992-93ನೇ ಸಾಲಿನ ಆಯವ್ಯಯದಲ್ಲಿ ಲೋಕೋಪಯೋಗಿ ಇಲಾಖೆಗೆ ಒದಗಿಸಿದ